ಡಯಾಲಿಸಿಸ್ ಘಟಕ ಸ್ಥಾಪನೆ

510(775); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ಪ್ರತಿ ಜಿಲ್ಲೆಯ ಒಂದು ತಾಲ್ಲೂಕು ಆಸ್ಪತ್ರೆಯಲ್ಲಿ ಒಂದು ಉತ್ತರ ಡಯಾಲಿಸಿಸ್ ಘಟಕ ಸ್ಥಾಪನೆಯ ಪ್ರಕ್ರಿಯೆ ಯಾವ ಹಂತದಲ್ಲಿದೆ;

ಆ) ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ತಾಲ್ಲೂಕುಗಳ ಆಸ್ಪತ್ರೆಗಳನ್ನು ಈ ಸೌಲಭ್ಯಕ್ಕೆ ಆಯ್ಕೆ ಮಾಡಲಾಗಿದೆ;

ಇ) ಇದುವರೆಗೆ ಎಷ್ಟು ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಘಟಕ ಸ್ಥಾಪಿಸಲಾಗಿದೆ; ಇದಕ್ಕಾಗಿ 2013–14; 2014–15 ಮತ್ತು 2015–16ನೇ ಸಾಲಿನಲ್ಲಿ ಒದಗಿಸಿರುವ ಅನುದಾನ ಎಷ್ಟು (ಜಿಲ್ಲೆ ಮತ್ತು ತಾಲ್ಲೂಕುವಾರು ವಿವರ ಒದಗಿಸುವುದು);

ಈ) ಈ ಸೇವೆಯನ್ನು ನೀಡಲು ಡಯಾಲಿಸಿಸ್ ತಜ್ಞರುಗಳನ್ನು ನೇಮಕ ಮಾಡಲಾಗಿದೆಯೇ; ಪ್ರತಿಯೊಂದು ತಾಲ್ಲೂಕು ಆಸ್ಪತ್ರೆಯಲ್ಲೂ (ಜಿಲ್ಲಾ ಕೇಂದ್ರವನ್ನು ಹೊರತುಪಡಿಸಿ) ಡಯಾಲಿಸಿಸ್ ಘಟಕ ಸ್ಥಾಪನೆಗೆ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಯು.ಟಿ. ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಪ್ರತಿ ಜಿಲ್ಲೆಯ ಒಂದು ತಾಲ್ಲೂಕು ಆಸ್ಪತ್ರೆಯಲ್ಲಿ ಡಯಾಲಿಸಿಸ್ ಘಟಕ ಸ್ಥಾಪಿಸಲಾಗಿದ್ದು, ಈ ಪೈಕಿ 16 ಘಟಕಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿವೆ. ಬಾಕಿ 15 ಘಟಕಗಳು ಕೆಲವು ಸಣ್ಣಪುಟ್ಟ ಕಾರಣಗಳಿಂದ ಕಾರ್ಯಾರಂಭವಾಗಿರುವುದಿಲ್ಲ. ಅವುಗಳು ಸಹ ಸದ್ಯದಲ್ಲೇ ಕಾರ್ಯಾರಂಭ ಮಾಡಲಿವೆ.

ಆ) ವಿವರ ಅನುಬಂಧದಲ್ಲಿ ನೀಡಲಾಗಿದೆ.

ಇ) ತಾಲ್ಲೂಕು ಆಸ್ಪತ್ರೆಯಲ್ಲಿ ಸ್ಥಾಪಿತವಾಗಿರುವ ಡಯಾಲಿಸಿಸ್ ಘಟಕದ ವಿವರ ಅನುಬಂಧದಲ್ಲಿ ನೀಡಿದೆ. ಈ ಕಾರ್ಯಕ್ರಮಕ್ಕಾಗಿ ಒಟ್ಟಾರೆಯಾಗಿ (ಜಿಲ್ಲೆ/ತಾಲ್ಲೂಕುವಾರು ಪ್ರತ್ಯೇಕವಾಗಿ ಇರುವುದಿಲ್ಲ) 2013–14ರಲ್ಲಿ ರೂ. 500.00 ಲಕ್ಷಗಳು, 2014–15ರಲ್ಲಿ ರೂ. 500.00 ಲಕ್ಷಗಳು ಮತ್ತು 2015–16ರಲ್ಲಿ ರೂ. 500.00 ಲಕ್ಷಗಳನ್ನು ಒದಗಿಸಲಾಗಿದೆ.

ಈ) ಡಯಾಲಿಸಿಸ್ ಸೇವೆ ನೀಡಲು ವಿಶೇಷವಾಗಿ ನೆಫ್ರೋಲಾಜಿಸ್ಟ್ ತರಬೇತಿ ಹೊಂದಿದ ತಜ್ಞವೈದ್ಯರ ಅವಶ್ಯಕತೆ ಇರುತ್ತದೆ. ಆದರೆ ಇಲಾಖೆಯಲ್ಲಿ ಕೆಲವೇ ಜಿಲ್ಲಾ ಆಸ್ಪತ್ರೆಗಳಲ್ಲಿ ಮಾತ್ರ ನೆಫ್ರೋಲಾಜಿಸ್ಟ್‌ಗಳು ಇದ್ದಾರೆ. ಆದುದರಿಂದ ತಾಲ್ಲೂಕು ಆಸ್ಪತ್ರೆಯಲ್ಲಿರುವ ಈ ಕೇಂದ್ರಗಳಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಫಿಜಿಷಿಯನ್ ಅಥವಾ ಮಕ್ಕಳ ತಜ್ಞರಿಗೆ ಬೆಂಗಳೂರಿನ ನೆಫ್ರೋಲಾಜಿಸ್ಟ್ ಸಂಸ್ಥೆಯಲ್ಲಿ ಒಂದು ತಿಂಗಳ ತರಬೇತಿ ನೀಡಿ ಡಯಾಲಿಸಿಸ್ ಸೇವೆ ನೀಡಲಾಗುತ್ತಿದೆ.

ಅನುಬಂಧ

ಹೊಸ ತಾಲ್ಲೂಕು ಡಯಾಲಿಸಿಸ್ ಕೇಂದ್ರಗಳ ಪಟ್ಟಿ.

ಕ್ರ.ಸಂ.	ಜಿಲ್ಲೆಯ ಹೆಸರು	ಆಸ್ಪತ್ರೆಯ ಹೆಸರು	
ಹಾಲಿ ಕಾರ್ಯ ನಿರ್ವಹಿಸುತ್ತಿರುವ ಘಟಕಗಳು			
1.	ದಕ್ಷಿಣ ಕನ್ನಡ	ಸಾರ್ವಜನಿಕ ಆಸ್ಪತ್ರೆ, ಪುತ್ತೂರು	ಕಾರ್ಯ ನಿರ್ವಹಿಸುತ್ತಿದೆ.
2.	ರಾಯಚೂರು	ಸಾರ್ವಜನಿಕ ಆಸ್ಪತ್ರೆ, ಲಿಂಗಸ್ಗೂರು	ಕಾರ್ಯ ನಿರ್ವಹಿಸುತ್ತಿದೆ.
3.	ಉಡುಪಿ	ಸಾರ್ವಜನಿಕ ಆಸ್ಪತ್ರೆ, ಕುಂದಾಪುರ	ಕಾರ್ಯ ನಿರ್ವಹಿಸುತ್ತಿದೆ.
4.	ಮೈಸೂರು	ಸಾರ್ವಜನಿಕ ಆಸ್ಪತ್ರೆ, ಹುಣಸೂರು	ಕಾರ್ಯ ನಿರ್ವಹಿಸುತ್ತಿದೆ.
5.	ಕೊಪ್ಪಳ	ಜಿಲ್ಲಾ ಆಸ್ಪತ್ರೆ, ಕೊಪ್ಪಳ	ಕಾರ್ಯ ನಿರ್ವಹಿಸುತ್ತಿದೆ.
6.	ಯಾದಗಿರಿ	ಜಿಲ್ಲಾ ಆಸ್ಪತ್ರೆ, ಯಾದಗಿರಿ	ಕಾರ್ಯ ನಿರ್ವಹಿಸುತ್ತಿದೆ.
7.	ಬೆಳಗಾಂ	ಸಾರ್ವಜನಿಕ ಆಸ್ಪತ್ರೆ, ಗೋಕಾಕ್	ಕಾರ್ಯ ನಿರ್ವಹಿಸುತ್ತಿದೆ.
8.	ಕೊಡಗು	ಸಾರ್ವಜನಿಕ ಆಸ್ಪತ್ರೆ, ಸೋಮವಾರ ಪೇಟೆ	ಕಾರ್ಯ ನಿರ್ವಹಿಸುತ್ತಿದೆ.
9.	ಚಿಕ್ಕಬಳ್ಳಾಪುರ	ಸಾರ್ವಜನಿಕ ಆಸ್ಪತ್ರೆ, ಚಿಂತಾಮಣಿ	ಕಾರ್ಯ ನಿರ್ವಹಿಸುತ್ತಿದೆ.
10.	ಬೆಳಗಾಂ	ಸಾರ್ವಜನಿಕ ಆಸ್ಪತ್ರೆ, ಚಿಕ್ಕೋಡಿ	ಕಾರ್ಯ ನಿರ್ವಹಿಸುತ್ತಿದೆ.
11.	ಚಿತ್ರದುರ್ಗ	ಸಾರ್ವಜನಿಕ ಆಸ್ಪತ್ರೆ, ಚಳ್ಳಕೆರೆ	ಕಾರ್ಯ ನಿರ್ವಹಿಸುತ್ತಿದೆ.
12.	ಬಾಗಲಕೋಟೆ	ಸಾರ್ವಜನಿಕ ಆಸ್ಪತ್ರೆ, ಹುನಗುಂದ	ಕಾರ್ಯ ನಿರ್ವಹಿಸುತ್ತಿದೆ.
13.	ಬಿಜಾಪುರ	ಸಾರ್ವಜನಿಕ ಆಸ್ಪತ್ರೆ,	ಕಾರ್ಯ ನಿರ್ವಹಿಸುತ್ತಿದೆ.

		ಬಸವನಬಾಗೇವಾಡಿ	
14.	ಕಾರವಾರ	ಸಾರ್ವಜನಿಕ ಆಸ್ಪತ್ರೆ, ದಾಂಡೇಲಿ	ಕಾರ್ಯ ನಿರ್ವಹಿಸುತ್ತಿದೆ.
15.	ಚಿಕ್ಕಮಗಳೂರು	ಸಾರ್ವಜನಿಕ ಆಸ್ಪತ್ರೆ, ತರಿಕೆರೆ	ಕಾರ್ಯ ನಿರ್ವಹಿಸುತ್ತಿದೆ.
16.	ಬಳ್ಳಾರಿ	ಸಾರ್ವಜನಿಕ ಆಸ್ಪತ್ರೆ, ಸಿರಗುಪ್ಪ	ಪ್ರಾರಂಭಿಸಲಾಗಿದೆ. ಆದರೆ ರೋಗಿಗಳಿರುವುದಿಲ್ಲ.
ಸದ್ಯದಲ್ಲಿಯೇ ಕಾರ್ಯರಂಭ ಮಾಡಲಿರುವ ಘಟಕಗಳು			
1	ಚಾಮರಾಜನಗರ	ಸಾರ್ವಜನಿಕ ಆಸ್ಪತ್ರೆ, ಕೊಳ್ಳೇಗಾಲ	ಉದ್ಘಾಟನೆಯಾಗಿದ್ದು ಕಾರ್ಯರಂಭ ಮಾಡಬೇಕಿದೆ.
2	ಬೆಂಗಳೂರು (ಗ್ರಾ)	ಸಾರ್ವಜನಿಕ ಆಸ್ಪತ್ರೆ, ದೊಡ್ಡಬಳ್ಳಾಪುರ	ಉದ್ಘಾಟನೆಗೆ ಶಾಸಕರ ಸಮಯ ನೀರಿಕ್ಷಣೆಯಲ್ಲಿದೆ.
3	ತುಮಕೂರು	ಸಾರ್ವಜನಿಕ ಆಸ್ಪತ್ರೆ, ಮಧುಗಿರಿ	ಉದ್ಘಾಟನೆಗೆ ಶಾಸಕರ ಸಮಯ ನೀರಿಕ್ಷಣೆಯಲ್ಲಿದೆ.
4	ದಾವಣಗೆರೆ	ಸಾರ್ವಜನಿಕ ಆಸ್ಪತ್ರೆ, ಜಗಳೂರು	ಉದ್ಘಾಟನೆಗೆ ಶಾಸಕರ ಸಮಯ ನೀರಿಕ್ಷಣೆಯಲ್ಲಿದೆ.
5	ಹಾವೇರಿ	ಸಾರ್ವಜನಿಕ ಆಸ್ಪತ್ರೆ, ಶಿಗ್ಗಾಂವ್	ಉದ್ಘಾಟನೆಗೆ ಶಾಸಕರ ಸಮಯ ನೀರಿಕ್ಷಣೆಯಲ್ಲಿದೆ.
6	ಧಾರವಾಡ	ಸಾರ್ವಜನಿಕ ಆಸ್ಪತ್ರೆ, ಕಲಘಟಗಿ	ಉದ್ಘಾಟನೆಗೆ ಶಾಸಕರ ಸಮಯ ನೀರಿಕ್ಷಣೆಯಲ್ಲಿದೆ.
7	ಹಾಸನ	ಸಾರ್ವಜನಿಕ ಆಸ್ಪತ್ರೆ, ಅರಸೀಕೆರೆ	ಉದ್ಘಾಟನೆಗೆ ಶಾಸಕರ ಸಮಯ

			ನೀರಿಕ್ಷಣೆಯಲ್ಲಿದೆ.
8	ಮಂಡ್ಯ	ಸಾರ್ವಜನಿಕ ಆಸ್ಪತ್ರೆ, ಮಳವಳ್ಳಿ	ಯಂತ್ರಗಳನ್ನು ಅಳವಡಿಸಿದ್ದು ಸದ್ಯದಲ್ಲಿಯೇ ಕಾರ್ಯರಂಭ ಮಾಡಬೇಕಿದೆ.
9	ರಾಮನಗರ	ಸಾರ್ವಜನಿಕ ಆಸ್ಪತ್ರೆ, ಕನಕಪುರ	ನೀರಿನ ಪರೀಕ್ಷೆ ವರದಿ ಬಂದ ನಂತರ ಪ್ರಾರಂಭಿಸಲಾಗುವುದು.
10	ಬೀದರ್	ಸಾರ್ವಜನಿಕ ಆಸ್ಪತ್ರೆ, ಹುಮ್ನಾಬಾದ್	ನೀರಿನ ಪರೀಕ್ಷೆ ವರದಿ ಬಂದ ನಂತರ ಪ್ರಾರಂಭಿಸಲಾಗುವುದು.
11	ಗುಲ್ಬರ್ಗಾ	ಸಾರ್ವಜನಿಕ ಆಸ್ಪತ್ರೆ, ಚಿಂಚೋಳಿ	ಯಂತ್ರಗಳನ್ನು ಅಳವಡಿಸಿದ್ದು ಕಾರ್ಯರಂಭ ಮಾಡಬೇಕಿದೆ.
12	ಕೋಲಾರ	ಸಾರ್ವಜನಿಕ ಆಸ್ಪತ್ರೆ, ಕೆ.ಜಿ.ಎಫ್.	ನೀರಿನ ಪರೀಕ್ಷೆ ವರದಿ ಬಂದ ನಂತರ ಪ್ರಾರಂಭಿಸಲಾಗುವುದು.
13	ಶಿವಮೊಗ್ಗ	ಸಾರ್ವಜನಿಕ ಆಸ್ಪತ್ರೆ, ತೀರ್ಥಹಳ್ಳಿ	ನೀರಿನ ಪರೀಕ್ಷೆ ವರದಿ ಬಂದ ನಂತರ ಪ್ರಾರಂಭಿಸಲಾಗುವುದು.
14	ಗದಗ	ಸಾರ್ವಜನಿಕ ಆಸ್ಪತ್ರೆ, ಶಿರಹಟ್ಟಿ	15 ದಿನಗಳಲ್ಲಿ ಪ್ರಾರಂಭಿಸಲಾಗುವುದು.
15	ಬೆಳಗಾಂ	ಸಾರ್ವಜನಿಕ ಆಸ್ಪತ್ರೆ, ರಾಮದುರ್ಗ	ಜನರೇಟರ್ ಅಳವಡಿಸಿದ ನಂತರ ಕಾರ್ಯರಂಭ ಮಾಡಲಾಗುವುದು.